ಓ. ಪಿ. ಶರ್ಮ
ಕನ್ನಡಕ್ಕೆ : ಮಾಧವ ಐತಾಳ್

ವಿಜಯದ ಹಾದಿ



- ಭಾರಿ ಅಡೆತಡೆ ನಡುವೆಯೂ ವಿಜಯಶಾಲಿ ಆಗುವುದು ಹೇಗೆ ?
- ಜೀವನದ ಪ್ರಸಂಗಗಳನ್ನು ಆಧರಿಸಿದ, ಆತ್ಮವಿಶ್ವಾಸ ಹೆಚ್ಚಿಸುವ, ಭರವಸೆ ಮೂಡಿಸುವ ಉದಾಹರಣೆಗಳು
- ಸವಾಲುಗಳನ್ನು ಅವಕಾಶವನ್ನಾಗಿಸುವ ಬಗೆ
- ತಪ್ಪುಗಳಿಂದ ಕಲಿಕೆ, ಯಶಸ್ಸಾಗಿ ಪರಿವರ್ತನೆ

V&S PUBLISHERS

ವಿಜಯದ ಹಾದಿ

ಯಶಸ್ವಿ ಆತ್ಮವಿಶ್ವಾಸವುಳ್ಳ ವ್ಯಕ್ತಿತ್ವ ನಿರ್ಮಾಣಕ್ಕೆ ಕೆಲವು ಟಿಪ್ಸ್

Be A Winner

Moral Boosting Tips for a Confident and Successful Personality

ಓ. ಪಿ. ಶರ್ಮ

ಕನ್ನಡಕ್ಕೆ : ಮಾಧವ ಐತಾಳ್

V&S PUBLISHERS

Published by:

V&S PUBLISHERS

F-2/16, Ansari road, Daryaganj, New Delhi-110002
☎ 23240026, 23240027 • *Fax:* 011-23240028
Email: info@vspublishers.com • *Website:* www.vspublishers.com

Regional Office : Hyderabad
5-1-707/1, Brij Bhawan (Beside Central Bank of India Lane)
Bank Street, Koti, Hyderabad - 500 095
☎ 040-24737290
E-mail: vspublishershyd@gmail.com

Branch Office : Mumbai
Jaywant Industrial Estate, 1st Floor–108, Tardeo Road
Opposite Sobo Central Mall, Mumbai – 400 034
☎ 022-23510736
E-mail: vspublishersmum@gmail.com

Follow us on:





© Copyright: V&S PUBLISHERS
ISBN 978-93-505738-9-1

DISCLAIMER

While every attempt has been made to provide accurate and timely information in this book, neither the author nor the publisher assumes any responsibility for errors, unintended omissions or commissions detected therein. The author and publisher make no representation or warranty with respect to the comprehensiveness or completeness of the contents provided.

All matters included have been simplified under professional guidance for general information only without any warranty for applicability on an individual. Any mention of an organization or a website in the book by way of citation or as a source of additional information doesn't imply the endorsement of the content either by the author or the publisher. It is possible that websites cited may have changed or removed between the time of editing and publishing the book.

Results from using the expert opinion in this book will be totally dependent on individual circumstances and factors beyond the control of the author and the publisher.

It makes sense to elicit advice from well informed sources before implementing the ideas given in the book. The reader assumes full responsibility for the consequences arising out from reading this book. For proper guidance, it is advisable to read the book under the watchful eyes of parents/guardian. The purchaser of this book assumes all responsibility for the use of given materials and information. The copyright of the entire content of this book rests with the author/publisher. Any infringement/transmission of the cover design, text or illustrations, in any form, by any means, by any entity will invite legal action and be responsible for consequences thereon.

ಪರಿವಿಡಿ

1.	ತಪ್ಪುಗಳ ಬಗ್ಗೆ ಹೆದರಿಕೆ ಬೇಡ	5
2.	ಭಾವನೆಗಳ ನಿಯಂತ್ರಣ ಹೇಗೆ ?	8
3.	ಕೆಲಸವನ್ನು ಪ್ರೀತಿಸುವುದು	12
4.	ಟೀಕೆಗಳಿಗೆ ಎದೆಗುಂದದಿರಿ	15
5.	ಸೋಲನ್ನು ಜಯವಾಗಿ ಪರಿವರ್ತಿಸಿ	20
6.	ಕಲ್ಪನೆಯ ಪವಾಡ ಶಕ್ತಿ	24
7.	ಸಮತೋಲನವೇ ಬಲ	27
8.	ಕೆಟ್ಟ ಹವ್ಯಾಸ ತೊರೆಯಿರಿ	30
9.	ನಿಮ್ಮ ವ್ಯಕ್ತಿತ್ವವೇ ನಿಮ್ಮ ಐಶ್ವರ್ಯ	34
10.	ಉತ್ಸಾಹದಿಂದ ಉಪಯೋಗ	38
11.	ಯೌವನ ವ್ಯರ್ಥಗೊಳಿಸದಿರಿ	40
12.	ಭಾವನಾತ್ಮಕ ಕಲೆಯಿಂದ ಹಿನ್ನಡೆ	46
13.	ಶ್ರೇಷ್ಠ ವ್ಯಕ್ತಿಗಳು ಏಕೆ ಶ್ರೇಷ್ಠರು ?	49
14.	ಅಸಾಂದಾಯಿಕ ಚಿಂತನ ಶೈಲಿ	52
15.	ಮನಸ್ಸಿಗೆ ತರಬೇತಿ	55
16.	ಗುರಿ ಮುಟ್ಟುವುದು ಸಾಧ್ಯವಿದೆ	58

17. ತಪ್ಪುಗಳಿಂದ ಕಲಿಕೆ ಹೇಗೆ ? 61
18. ಚಾತುರ್ಯವೂ ಮುಖ್ಯ 63
19. ಧೈರ್ಯ, ನಂಬಿಕೆಯೇ ಬಲ 66
20. ನಿಮ್ಮ ನಿರ್ಧಾರವೇ ನಿಮ್ಮ ಭವಿಷ್ಯ 70
21. ಯಶಸ್ಸಿನ ರೀತಿ, ನೀತಿ 72
22. ಮಹತ್ವಾಕಾಂಕ್ಷೆಯಿಂದ ಯಶಸ್ಸು 75
23. ದೂರು ಡಬ್ಬಿ ಆಗದಿರಿ 78
24. ಸರಿಯಾದ ಆಲೋಚನೆಯ ಫಲ 82
25. ಕೆಲಸವನ್ನು ಇಷ್ಟಪಡುವುದು ಹೇಗೆ ? 85
26. ಕ್ರಿಯಾಶೀಲತೆಯ ಪ್ರತಿಫಲ 89
27. ಪದಗಳ ಮಾಂತ್ರಿಕ ಶಕ್ತಿ 92
28. ನೈತಿಕತೆಯ ಬೆಳಕು 95
29. ವೈವಾಹಿಕ ಬದುಕಿನ ನೇಪ್ಯ 98
30. ಸಾಂಸ್ಕೃತಿಕ ಶ್ರೇಷ್ಠತೆ 101
31. ಭ್ರಷ್ಟಾಚಾರವೆಂಬ ಕ್ಯಾನ್ಸರ್ 105

ತಪ್ಪುಗಳ ಬಗ್ಗೆ ಹೆದರಿಕೆ ಬೇಡ

ಪ್ರತಿದಿನವೂ ಹೊಸ ದಿನ. ಅದನ್ನು ಉತ್ಸಾಹ, ಭರವಸೆಯಿಂದ ಎದುರುಗೊಳ್ಳಿ. ನೆನ್ನೆ ಈಗಾಗಲೇ ಕಳೆದು ಹೋಗಿದೆ. ನಿಮ್ಮ ಮನಸ್ಸಿನಿಂದ ಆ ಹೊರೆಯನ್ನು ಇಳಿಸಬಾರದೇಕೆ?

ದೇವರು ಮಾತ್ರ ಪರಿಪೂರ್ಣ. ಮನುಷ್ಯ ಎಷ್ಟೇ ಬುದ್ಧಿವಂತನಾಗಿದ್ದರೂ, ತಪ್ಪು ಮಾಡುತ್ತಾನೆ. ಹೀಗಾಗಿ, ಮಾಡಿದ ತಪ್ಪನ್ನು ಬದಿಗಿಟ್ಟು ಅದು ನಮ್ಮ ಮೇಲೆ ಹೊರೆಯಾಗದಂತೆ ನೋಡಿಕೊಂಡು ಮುಂದೆ ಸಾಗಬೇಕು.



ಪ್ರಗತಿಯ ಹಾದಿಯಲ್ಲಿ ತಪ್ಪುಗಳು ಆಗುತ್ತವೆ. ಜಾರ್ಜ್ ಬರ್ನಾಡ್ ಶಾ ಒಮ್ಮೆ ಹೇಳಿದ್ದರು, 'ಮನುಷ್ಯರು ಮುಗ್ಗರಿಸುತ್ತಲೇ ಮಂಜುಗಡ್ಡೆ ಮೇಲೆ ಜಾರಾಡಲು ಕಲಿಯುತ್ತಾರೆ. ತಪ್ಪು ಮಾಡುತ್ತ ಮೂರ್ಖನಂತೆ ವರ್ತಿಸುತ್ತಲೇ ಮುಂದೆ ಮುಂದೆ ಚಲಿಸುತ್ತಾರೆ.' ಗುಹಾಮಾನವ ಆಧುನಿಕ ಮಾನವನಾಗಿ ಬದಲಾವಣೆ ಆದದ್ದು ಪ್ರಯತ್ನ ತಪ್ಪು (ಟ್ರಯಲ್-ಎರರ್) ಮೂಲಕವೇ. ತಪ್ಪುಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಪ್ರಯತ್ನ ನಡೆಸು

ತ್ತಲೇ ಹೋದ ಕೆಲವರಿಂದಲೇ ಜಗತ್ತಿನ ದೆಸೆ ಬದಲಾಯಿಸಿದ ಆವಿಷ್ಕಾರ ನಡೆದವು.

ಕಮಲಾಳ 14 ವರ್ಷದ ಮಗಳು ನಿಮ್ಮಿ, ತಾಯಿಗೆ ಅಡುಗೆಯಲ್ಲಿ ಸಹಾಯ ಮಾಡಲು 'ತರಕಾರಿ ಕತ್ತರಿಸಿ ಕೊಡುತ್ತೇನೆ' ಎಂದಾಗಲೆಲ್ಲ ಆಕೆಗೆ ಸಿಗುತ್ತಿದ್ದ ಪ್ರತಿಕ್ರಿಯೆ: 'ನೀನು ಹಾಳು ಮಾಡಿ ಬಿಡುತ್ತಿ.' ಆದರೆ, ಒಮ್ಮೆಯೂ ಕೆಡದೆ, ಪದಾರ್ಥ ಸೀದು ಹೋಗದೆ ಅಡುಗೆ ಕಲಿಯಲು ಸಾಧ್ಯವಿಲ್ಲ ಎಂಬುದನ್ನು ಕಮಲಾ ಅರ್ಥ ಮಾಡಿಕೊಳ್ಳಲಿಲ್ಲ. ಮಕ್ಕಳು ತಪ್ಪು ಮಾಡಿದಾಗ ತಂದೆ ತಾಯಿ ಅದನ್ನು ಕ್ಷಮಿಸಬೇಕು. ಟೀಕೆಯಿಂದ, ಬೈಗುಳದಿಂದ ಕಲಿಕೆ ಸಾಧ್ಯವಿಲ್ಲ ಎಂಬುದು ಪೋಷಕರಿಗೆ ಅರ್ಥವಾಗಬೇಕು.

ಸದಾ ಬೈಯುತ್ತಲೇ ಇರುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದರಿಂದ ಮಕ್ಕಳ ಆತ್ಮವಿಶ್ವಾಸ ಕುಂದಿ, ಅವರು ನಿಷ್ಕ್ರಿಯರಾಗಿ ಬಿಡುತ್ತಾರೆ. ಕೆಲಕಾಲಾನಂತರ ಮಕ್ಕಳು ತಂದೆ-ತಾಯಿಯನ್ನು ದ್ವೇಷಿಸಲಾರಂಭಿಸುತ್ತಾರೆ. ಮಕ್ಕಳಿಗೆ ಕೆಲಸ ಮಾಡಲು ಬಿಡಿ. ತಪ್ಪುಗಳ ಮೂಲಕ ಅವರು ಕಲಿಯುತ್ತ ಮುಂದೆ ಚಲಿಸುತ್ತಾರೆ. ತಪ್ಪಿನ ಭೀತಿಯಿಂದ ಅವರಿಗೆ ಕೆಲಸವನ್ನೇ ಮಾಡಲು ಬಿಡದಿದ್ದರೆ ಅವರ ಬೆಳವಣಿಗೆ ಕುಂಠಿತವಾಗುತ್ತದೆ.

ನಿರ್ದಿಷ್ಟ ವೃತ್ತಿಯೊಂದರಲ್ಲಿ ಈಗಾಗಲೇ ಉತ್ತಮ ಕೆಲಸಗಾರರು ಇದ್ದಾರೆ ಎಂದು ಕೆಲವರು ಕೆಲಸವೊಂದನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ. ಇಂಥ ಉತ್ತಮ ವೃತ್ತಿನಿರತರಿಂದ ತಮಗೆ ವೈಫಲ್ಯ ಕಟ್ಟಿಟ್ಟ ಬುತ್ತಿ ಎಂಬುದು ಅವರ ಅಭಿಪ್ರಾಯ ಆಗಿರುತ್ತದೆ. ಇಂಥ ಉತ್ತಮ ಕೆಲಸಗಾರರು ಒಂದೇ ರಾತ್ರಿಯಲ್ಲಿ ಸಂಭವಿಸಿರುವುದಿಲ್ಲ ಎಂಬುದನ್ನು ಅವರು ಮರೆಯುತ್ತಾರೆ. ಅವರು ಕೂಡಾ ತಪ್ಪು-ಒಪ್ಪು-ತಿದ್ದಿಕೊಳ್ಳುವಿಕೆ ಮೂಲಕ ಇಂದಿನ ಸ್ಥಿತಿ ತಲುಪಿರುತ್ತಾರೆ. ಇಂಥವರು ತಮ್ಮನ್ನು ತುಳಿಯುತ್ತಾರೆ, ಹೀಯಾಳಿಸುತ್ತಾರೆ ಎಂದು ಕಿರಿಯರು ಭಾವಿಸಬಾರದು. ವಾಸ್ತವವೆಂದರೆ, ಸಮಚಿತ್ತದ ವ್ಯಕ್ತಿಗಳು ತಪ್ಪು ಮಾಡಿದ ಕಿರಿಯರನ್ನು ಹೀಯಾಳಿಸುವುದಿಲ್ಲ ಬದಲಿಗೆ, ತಿದ್ದುತ್ತಾರೆ. ಅಪರಿಪೂರ್ಣರು, ಅರೆಜ್ಞಾನಿಗಳು ಮಾತ್ರ ಬೇರೆಯವರನ್ನು ಕೀಳಾಗಿ ಕಾಣುತ್ತಾರೆ.

ನೀವು ಯೋಜನೆಯೊಂದನ್ನು ಜಾರಿಗೊಳಿಸುವ ಮುನ್ನ ಸ್ನೇಹಿತರೊಡನೆ ಚರ್ಚಿಸಲು ಹಿಂಜರಿಯಬೇಡಿ. ಅವರು ಯಾವುದೇ ತಪ್ಪನ್ನು ಎತ್ತಿ ತೋರಿಸಿದರೆ, ಹೊಟ್ಟೆಕಿಚ್ಚಿನಿಂದ ಹೀಗೆ ಮಾಡುತ್ತಿದ್ದಾರೆ ಎಂಬು ಭಾವಿಸದಿರಿ. ಅವರ ಸಲಹೆಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಿ. ಇಂಥ ಸಲಹೆಗಳಿಂದ ನಿಮ್ಮ ಯೋಜನೆಯ ಯಶಸ್ಸು ಇನ್ನಷ್ಟು ಖಚಿತವಾಗುತ್ತದೆ.

ಒಂದೊಮ್ಮೆ ತಪ್ಪು ಮಾಡಿದಿರಿ ಎಂದಾದಲ್ಲಿ, ಅದನ್ನು ಒಪ್ಪಿಕೊಳ್ಳುವ ಧೈರ್ಯ ತೋರಿಸಿ. ತಪ್ಪನ್ನು ಒಪ್ಪಿಕೊಂಡು, ತಕ್ಷಣ ತಿದ್ದಿಕೊಂಡರೆ ಅದರಿಂದ ಆಗುವ ಹಾನಿ ಕಡಿಮೆ ಆಗುತ್ತದೆ. ಒಂದೊಮ್ಮೆ ತಿದ್ದಿಕೊಳ್ಳದೆ ಹೋದಲ್ಲಿ, ಅದರಿಂದ ಅಪಾರ ಹಾನಿ ಹಾಗೂ ನಿಮ್ಮ ಘನತೆಗೆ ಕುಂದುಂಟಾಗಲಿದೆ. ತಪ್ಪನ್ನು ಮುಚ್ಚಿಹಾಕುವುದು ಕೂಡಾ ಸರಿಯಲ್ಲ. ಒಂದು ಸುಳ್ಳು ಮುಚ್ಚಿ ಹಾಕಲು, ಸುಳ್ಳಿನ ಸರಮಾಲೆಯನ್ನೇ ಹೆಣೆಯಬೇಕಾಗುತ್ತದೆ. ಸುಳ್ಳು ಬಯಲಿಗೆ ಬರುವುದು ಖಚಿತವಾದ್ದರಿಂದ ನಿಮ್ಮ ಪ್ರತಿಷ್ಠೆಗೆ ಪೆಟ್ಟು ಬೀಳಲಿದೆ.

ತನ್ನ ತಪ್ಪು ಒಪ್ಪಿಕೊಂಡು, ಕ್ಷಮೆ ಕೇಳುವ ವ್ಯಕ್ತಿಯನ್ನು ದ್ವೇಷಿಸುವವರು ಇರಲಾರರು. 'ನನ್ನನ್ನು ಕ್ಷಮಿಸು. ನೀನು ಹೇಳಿದ್ದು ಸರಿ. ನಾನು ನಿನ್ನನ್ನು ತಪ್ಪಾಗಿ ಭಾವಿಸಿದೆ. ತಪ್ಪು ಸರಿಪಡಿಸಲು ನನಗೆ ಅವಕಾಶ ಕೊಡು,' ಎಂದು ಕೇಳಿಕೊಂಡಾಗ, 'ಹೋಗಯ್ಯ, ನಿನ್ನನ್ನು ನಾನು ಕ್ಷಮಿಸುವುದಿಲ್ಲ'' ಎಂದು ಹೇಳುವವರು ಇದ್ದಾರೆಯೇ?

ನಮ್ಮ ವೈಫಲ್ಯದ ಹೊಣೆಯನ್ನು ಬೇರೆಯವರ ಮೇಲೆ ಹೇರುವುದು ಸರಿಯಲ್ಲ. ವಿದ್ಯಾರ್ಥಿಗಳಲ್ಲಿ ಈ ಪ್ರವೃತ್ತಿ ಹೆಚ್ಚು. ಪರೀಕ್ಷೆಯಲ್ಲಿ ಫೇಲಾದವರು ಪಾಠ ಸರಿ ಮಾಡಲಿಲ್ಲ ಎಂದು ಮೇಷ್ಟ್ರನ್ನು ಇಲ್ಲವೇ ಅದೃಷ್ಟ ಸರಿಯಿಲ್ಲ ಎಂದು ದೂರಬಹುದು. ಸರಿಯಾಗಿ ಸಿದ್ಧತೆ ನಡೆಸದೆ, ವ್ಯಾಸಂಗ ಮಾಡದೆ ಅನುತ್ತೀರ್ಣನಾದೆ ಎಂದು ಅವರು ಒಪ್ಪಿಕೊಳ್ಳುವುದಿಲ್ಲ. ಯೋಜನೆಗಳು 'ಠುಸ್' ಎಂದಾಗ ಅದನ್ನು ಸಹೋದ್ಯೋಗಿಗಳ ಮೇಲೆ ಹಾಕುವ ಬಾಸ್‌ಗಳಿದ್ದಾರೆ. ಆದರೆ, ಯೋಜನೆ ಯಶಸ್ವಿಯಾದಲ್ಲಿ ತಮ್ಮ ಬೆನ್ನನ್ನು ತಟ್ಟಿಕೊಳ್ಳುತ್ತಾರೆ. ಯಶಸ್ಸನ್ನು ಸಹೋದ್ಯೋಗಿಗಳ ಜತೆ ಹಂಚಿಕೊಳ್ಳುವುದಿಲ್ಲ. ಯಶಸ್ಸಿನ ಶ್ರೇಯಸ್ಸು ತಮ್ಮದು ಎನ್ನುವವರು ಸೋಲಿನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದು ಹೇಡಿತನದ ಲಕ್ಷಣ.

ಹಿಂದೆ ಆದ ತಪ್ಪಿನ ಬಗ್ಗೆ ಕೊರಗುತ್ತ ಕೂರುವುದು ಸಕಾರಾತ್ಮಕ ಚಿಂತನೆಗೆ ಧಕ್ಕೆ ತರುತ್ತದೆ ಹಾಗೂ ಮನಸ್ಸಿನಲ್ಲಿ ಅನಗತ್ಯ ಕ್ಷೋಭೆಗೆ ಕಾರಣವಾಗುತ್ತದೆ. ಮನಸ್ಸಿನಲ್ಲಿ ಉಳಿದ ಭೂತಕಾಲದ ಕಸವನ್ನು ತೆಗೆದುಹಾಕಿ. ಪ್ರತಿದಿನ ಕೆಲಸವನ್ನು ಸ್ವಚ್ಛ ಮನಸ್ಸು-ಉತ್ಸಾಹದಿಂದ ಆರಂಭಿಸಿ. ಇದರಿಂದ ಸಂತೋಷ ಹಾಗೂ ಯಶಸ್ಸು ನಿಮ್ಮದಾಗುತ್ತದೆ.

❑❑

ಭಾವನೆಗಳ ನಿಯಂತ್ರಣ ಹೇಗೆ ?

ಭಾವನೆಗಳು ಸಂತೋಷ ಮತ್ತು ತೃಪ್ತಿಯನ್ನು ಕೊಡುತ್ತವೆ ಇಲ್ಲವೇ ಆನಂದವನ್ನೇ ಇಲ್ಲವಾಗಿಸ ಬಲ್ಲವು. ಆಯ್ಕೆ ನಮ್ಮದು.

ನಾವೆಲ್ಲ ಭಾವನಾತ್ಮಕ ಜೀವಿಗಳು. ಹೂವಿನಲ್ಲಿ ಸುಗಂಧ ಇರುವಂತೆ, ಭಾವನೆಗಳಿಲ್ಲದ ಮನುಷ್ಯರೇ ಇಲ್ಲ ಎನ್ನಬಹುದು. ಅವು ನಮ್ಮ ಸಂತೋಷವನ್ನು ಇಮ್ಮಡಿಗೊಳಿಸುತ್ತವೆ ಇಲ್ಲವೇ ನಾಶಗೊಳಿಸುತ್ತವೆ. ಆದ್ದರಿಂದ ಅವುಗಳನ್ನು ನಿಯಂತ್ರಿಸುವುದನ್ನು ನಾವು ಕಲಿಯಬೇಕಿದೆ. ಭಾವನೆಗಳಲ್ಲಿ 2 ವಿಧ. ಒಳ್ಳೆಯವು ಹಾಗೂ ಕೆಟ್ಟವು. ಒಳ್ಳೆಯ ಭಾವನೆಗಳು ನಮ್ಮ ವ್ಯಕ್ತಿತ್ವವನ್ನು ಆಕರ್ಷಕಗೊಳಿಸುತ್ತವೆ ಹಾಗೂ ಸಂತೋಷವನ್ನು ಹೆಚ್ಚಿಸುತ್ತವೆ. ಅವುಗಳನ್ನು ಬೆಳೆಸಿಕೊಳ್ಳಬೇಕು. ಕೆಟ್ಟ ಭಾವನೆಗಳು ಸಂತೋಷ ಹಾಗೂ ಕ್ಷಮತೆಯನ್ನು ಕೊಲ್ಲುತ್ತವೆ. ಅವನ್ನು ತ್ಯಜಿಸಬೇಕು.

ನಾನು ಸಂತೋಷವಾಗಿರಬೇಕು ಹಾಗೂ ಎಲ್ಲರೂ ನನಗೆ ಗೌರವ ಕೊಡಬೇಕು ಎಂದುಕೊಳ್ಳದವರು ಇದ್ದಾರೆಯೇ? ಇದಕ್ಕಾಗಿ ನಾವು ಬೇರೆಯವ ರನ್ನು ಇಷ್ಟ ಪಡಬೇಕು. ನಿಮ್ಮ ಸುತ್ತಲಿನವರ ಭಾವನೆಗಳನ್ನು ಗೌರವಿಸಬೇಕು ಹಾಗೂ ಅವರ ಸಾಧನೆಯನ್ನು ಗುರುತಿಸಿ, ಶ್ಲಾಘಿಸಬೇಕು. ನಿಮ್ಮ ಶ್ಲಾಘನೆ ಅಕೃತಿಮವಾಗಿದ್ದಲ್ಲಿ, ಅದು ಆ ವ್ಯಕ್ತಿಯ ಪ್ರೀತಿಯನ್ನು ಗೆಲ್ಲುತ್ತದೆ ಹಾಗೂ ಇನ್ನಷ್ಟು ಸಾಧನೆಗೆ ಹುರುಪು ತುಂಬುತ್ತದೆ.

ನೀವು ನೋಡಿರುತ್ತೀರಿ, ಕೆಲವರು ಊಟ ಹೇಗೇ ಇರಲಿ, ಸುಮ್ಮನೆ ತಿಂದು

ಏಳುತ್ತಾರೆ. ಅದರ ಬದಲು, ಖಾದ್ಯ ಚೆನ್ನಾಗಿದ್ದರೆ, ಮಾಡಿದವರು-ಬಡಿಸಿದವರಿಗೆ ಅದನ್ನು ಹೇಳಿ. ಮೆಚ್ಚುಗೆ ತೋರಿಸಿ. ಶ್ರಮಕ್ಕೆ ಬೆಲೆ ಸಿಕ್ಕಿತು ಎಂದುಕೊಂಡು ಅವರು ಖುಷಿಯಾಗುತ್ತಾರೆ.

ಮನುಷ್ಯರ ನಡುವಿನ ಸಂಬಂಧದಲ್ಲಿ ಪ್ರೇಮಕ್ಕಿಂತ ಮಿಗಿಲಾದದ್ದಿಲ್ಲ. ತಂದೆ ತಾಯಿ ಮಕ್ಕಳಿಗಾಗಿ, ಸೈನಿಕರು ದೇಶಕ್ಕಾಗಿ ಏನೆಲ್ಲ ತ್ಯಾಗ ಮಾಡುವುದು ಇದೇ ಪ್ರೇಮದಿಂದ. ಪ್ರಾಕೃತಿಕ ವಿಕೋಪಕ್ಕೆ ಸಿಕ್ಕಿ ನರಳಿದ ಜನರಿಗೆ ಬೇರೆಯವರು ಅಗತ್ಯವಾದ ನೆರವು ನೀಡುವುದೂ ಇದೇ ಕಾರಣದಿಂದ.

ಧೈರ್ಯ, ಭರವಸೆ ಮತ್ತು ತಾಳ್ಮೆ-ನಮಗೆ ಸಂತೋಷ ಕೊಡಬಲ್ಲ ಇತರ ಭಾವನೆಗಳು. ಸನ್ನಿವೇಶ ಯಾವುದೇ ಇರಲಿ, ಧೈರ್ಯ ಮುಖ್ಯ. ಧೈರ್ಯವಿಲ್ಲದಾತ ಬೃಹತ್ ಆದ ಸಾಧನೆ ಮಾಡಲಾರ. ಧೈರ್ಯಶಾಲಿಗಳಿಗೆ ವಿಧಿ ಕೂಡಾ ನೆರವಾಗುತ್ತದೆ. ಸೋಲನ್ನು ಗೆದ್ದಿದ್ದೇನೆ ಎನ್ನುವವರು ಪ್ರಾಯಶಃ ಯಾರೂ ಇರಲಿಕ್ಕಿಲ್ಲ. ಸೋಲುಗಳು ಅಪಾರ ನೋವಿಗೆ ಕಾರಣವಾಗುತ್ತವೆ. ಇಂಥ ಸನ್ನಿವೇಶ ದಲ್ಲಿ ವ್ಯಕ್ತಿಯನ್ನು ದಡಕ್ಕೆ ಮುಟ್ಟಿಸುವುದು ಭರವಸೆಯೆಂಬ ಹರಿಗೋಲು. ಮಹತ್ವದ ಯೋಜನೆಗಳನ್ನು ರೂಪಿಸಬಹುದು. ಆದರೆ, ತಾಳ್ಮೆ ಇಲ್ಲದಿದ್ದರೆ ಅವನ್ನು ನೆಲಕ್ಕೆ ಇಳಿಸುವುದು ಸಾಧ್ಯವಾಗದು. ಭಾರಿ ಉದ್ಯಮವೊಂದರ ಆರಂಭಕ್ಕೆ ಎಲ್ಲವೂ ಸಿದ್ಧವಾಗುತ್ತಿರುವಾಗ, ನೀವು ತಾಳ್ಮೆ ಕಳೆದುಕೊಂಡರೆ ಏನಾಗಬಹುದು ಎಂಬುದನ್ನು ನೀವೇ ಊಹಿಸಿ. ಭಯ, ಕೋಪ ಹಾಗೂ ದ್ವೇಷ ನಮ್ಮನ್ನು ಆಳಲು ಬಿಡಬಾರದು. ಇವು ಬದುಕಿನ ಸಂತೋಷವನ್ನೇ ಛಿದ್ರ ಮಾಡಿಬಿಡುತ್ತವೆ.

ಭಯದಿಂದ ಧೈರ್ಯ ಮಸುಕಾಗುತ್ತದೆ, ಕ್ರಿಯೆಗೆ ಪಾರ್ಶ್ವವಾಯು ಹೊಡೆಯುತ್ತದೆ. ಅನುತ್ತೀರ್ಣನಾಗುತ್ತೇನೆಂಬ ಭಯದಿಂದ ಪರೀಕ್ಷೆಯನ್ನೇ ತೆಗೆದು ಕೊಳ್ಳದವರಿದ್ದಾರೆ. ಇದಕ್ಕಾಗಿ ನಾನಾ ಕಾರಣಗಳನ್ನು ಕೊಡುತ್ತಾರೆ. ಆದರೆ, ಅದಕ್ಕೆಲ್ಲ ಅರ್ಥವಿಲ್ಲ. ತನ್ನ ಬೌದ್ಧಿಕ ಸಾಮರ್ಥ್ಯದ ಮೇಲೆ ಅವರಿಗೆ ನಂಬಿಕೆ ಇರುವುದಿಲ್ಲ. ಅಷ್ಟೆ. ಸಕಲ ಸಿದ್ಧತೆ ನಡೆಸಿ, ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿದರೆ, ಸೋಲಿನ ಸಾಧ್ಯತೆ ತೀರಾ ಕಡಿಮೆ.

ಗರ್ಭಧಾರಣೆ ಮತ್ತು ಮಾತೃತ್ವ ಕಷ್ಟದ ಕೆಲಸ. ಹೆರಿಗೆ ವೇಳೆ ತಾವು ಸಾಯುವ ಸಾಧ್ಯತೆ ಇದೆ ಎಂದು ಹೆದರುವವರೂ ಇದ್ದಾರೆ. ಹೆದರಿಕೆಯನ್ನು ಮುಖಾಮುಖಿ ಯಾಗಿ ಎದುರಿಸಿದಾಗ ಮಾತ್ರ ಅದನ್ನು ಜಯಿಸಬಹುದು.

ಕೋಪ- ಇನ್ನೊಂದು ನಕಾರಾತ್ಮಕ ಭಾವನೆ. ಇದರಿಂದ ಆಲೋಚನಾ ಶಕ್ತಿ ಕುಂಠಿತಗೊಳ್ಳುತ್ತದೆ. ಕೋಪವನ್ನು ನಿಯಂತ್ರಿಸಿಕೊಳ್ಳಲಾಗದ ವ್ಯಕ್ತಿ ತನ್ನ ಸುತ್ತ ಮರು ಭೂಮಿ ನಿರ್ಮಿಸಿಕೊಳ್ಳುತ್ತಾನೆ. ಸಣ್ಣ ಕಾರಣಕ್ಕೂ ಮಕ್ಕಳು ಹಾಗೂ ಕೆಲಸದವರ